ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	651
2	ಉತ್ತರಿಸಬೇಕಾದ ದಿನಾಂಕ :	24/07/2024
3	ಪ್ರಶ್ನೆ ಕೇಳಿರುವ ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು :	ಶ್ರೀ ಸಿದ್ದು ಸವದಿ (ತೇರದಾಳ)
4	ಉತ್ತರಿಸಬೇಕಾದ ಸಚಿವರು :	ಮಾನ್ಯ ಕೃಷಿ ಸಚಿವರು
5	ವಿಷಯ	ಜೈವಿಕ ಗೊಬ್ಬರಗಳನ್ನು ಬಳಸುವುದು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರೈತರು ಬೆಳೆಯುವ ಬೆಳೆಗಳಿಗೆ ರಾಸಾಯನಿಕ ಸಿಂಪರಣೆ ಮಾಡುವುದರಿಂದ ಅನೇಕ ಮಾರಕ ಖಾಯಿಲೆಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ರಾಸಾಯನಿಕ ಸಿಂಪರಣೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ಒದಗಿಸುವುದು)	ರೈತರು ಬೆಳೆಯುವ ಬೆಳೆಗಳಿಗೆ ಅವೈಜ್ಞಾನಿಕ ಹಾಗೂ ಅಸಮರ್ಪಕವಾಗಿ ರಾಸಾಯನಿಕಗಳನ್ನು ಬಳಕೆ ಮಾಡಿದಲ್ಲಿ ಮಾನವ ಹಾಗೂ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಂಭವ ಹೆಚ್ಚಾಗಿರುತ್ತದೆ. ಕೃಷಿ ವಿಶ್ವವಿದ್ಯಾಲಯಗಳಿಂದ ನೀಡಲಾಗುವ ಸುಧಾರಿತಾ ಬೇಸಾಯ ಕ್ರಮಗಳನ್ವಯ ಮತ್ತು ಮಣ್ಣು ಪರೀಕ್ಷಾ ಆಧಾರದ ಮೇರೆಗೆ ರಸಗೊಬ್ಬರಗಳನ್ನು ಹಾಗೂ ಕೇಂದ್ರೀಯ ಕೀಟನಾಶಕ ಮಂಡಳಿ ಮತ್ತು ನೋಂದಣಿ ಸಮಿತಿ ಶಿಫಾರಸ್ಸಿನಂತೆ ಪೀಡೆನಾಶಕಗಳನ್ನು ಬೆಳೆಗಳಿಗೆ ಬಳಕೆ ಮಾಡಿದಲ್ಲಿ ಯಾವುದೇ ದುಷ್ಪರಿಣಾಮಗಳು ಕಂಡುಬರುವುದಿಲ್ಲ. ಆದರೆ, ಬೆಳೆಗಳಿಗೆ ಅವೈಜ್ಞಾನಿಕ ಹಾಗೂ ಅನಾವಶ್ಯಕವಾಗಿ ರಾಸಾಯನಿಕ ಸಿಂಪರಣೆ ಮಾಡುವುದರಿಂದ ಮಣ್ಣಿನ ಫಲವತ್ತತೆ ಹಾಗೂ ಮಣ್ಣಿನ ಆರೋಗ್ಯವು ಕುಂಠಿತವಾಗುತ್ತದೆ. ಅಲ್ಲದೆ ಇದರಿಂದಾಗಿ ಪರಿಸರದ ಮೇಲೆ ಮತ್ತು ಎಲ್ಲಾ ಜೀವರಾಶಿಗಳ ಆರೋಗ್ಯದ ಮೇಲೆ ಅನೇಕ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಆದಾಗ್ಯೂ, ಹೆಚ್ಚಾಗಿ ರಾಸಾಯನಿಕ ಗೊಬ್ಬರ ಮತ್ತು ಪೀಡೆನಾಶಕಗಳ ಬಳಕೆಯನ್ನು ತಪ್ಪಿಸಲು ಇಲಾಖೆಯ ವತಿಯಿಂದ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 1. ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಪೀಡೆ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಲು ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ. 2. ಬೀಜ ಮತ್ತು ಮಣ್ಣಿನಿಂದ ಹರಡುವ ರೋಗಗಳ ನಿಯಂತ್ರಣಕ್ಕೆ ಜೈವಿಕ ಪೀಡೆನಾಶಕಗಳನ್ನು ಬಳಸಿ ಬೀಜೋಪಚಾರ ಮಾಡಲು ಹಾಗೂ ಅವೈಜ್ಞಾನಿಕ ರಾಸಾಯನಿಕ

		ಪೀಡೆನಾಶಕಗಳ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಬೀಜೋಪಚಾರ ಆಂದೋಲನ ಹಾಗೂ ಸುರಕ್ಷಿತ ಕೀಟನಾಶಕಗಳ ಬಗ್ಗೆ ತರಬೇತಿಗಳನ್ನು ಹೋಬಳಿ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ . 3. ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಪೀಡೆನಾಶಕ ಶೇಷಾಂಶ ವಿಶ್ಲೇಷಣಾ ಪ್ರಯೋಗಾಲಕ್ಕೆ ಸಲ್ಲಿಸಲಾಗುತ್ತಿದ್ದು , ವಿಶ್ಲೇಷಣೆಯಲ್ಲಿ ಪೀಡೆನಾಶಕಗಳ ಅಂಶ ನಿಗಧಿಪಡಿಸಿರುವ ಗರಿಷ್ಠ ಮಿತಿಗಿಂತ ಹೆಚ್ಚಾಗಿ ಕಂಡುಬಂದಲ್ಲಿ ಆಯಾ ಪ್ರದೇಶದ ರೈತರಿಗೆ ಕಡಿಮೆ ರಾಸಾಯನಿಕ ಪೀಡೆನಾಶಕಗಳ ಬಳಕೆ ಮಾಡಲು ಹಾಗೂ ಪೀಡೆ ನಿರ್ವಹಣೆಯಲ್ಲಿ ಜೈವಿಕ ಪೀಡೆನಾಶಕಗಳನ್ನು ಬಳಕೆ ಮಾಡಲು ಅರಿವು ಮೂಡಿಸಲಾಗುತ್ತಿದೆ .
ಆ)	ರೈತರು ಬೆಳೆಯುವ ಬೆಳೆಗಳಿಗೆ ಜೈವಿಕ ಗೊಬ್ಬರ ಹಾಗೂ ಔಷಧಿ ಬಳಕೆ ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)	1. ರಾಸಾಯನಿಕ ಪೀಡೆನಾಶಕಗಳ ಬಳಕೆಯನ್ನು ಕಡಿಮೆಗೊಳಿಸಿ ಜೈವಿಕ ಪೀಡೆನಾಶಕಗಳ ಬಳಕೆಯನ್ನು ಉತ್ತೇಜಿಸಲು ಜೈವಿಕ ಮತ್ತು ಸಸ್ಯ ಮೂಲ ಪೀಡೆನಾಶಕಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ರೈತ ಸಂಪರ್ಕ ಕೇಂದ್ರಗಳ ಮೂಲಕ ಸಹಾಯಧನದಡಿ ವಿತರಿಸಲಾಗುತ್ತಿದೆ . 2. ಕೇಂದ್ರ ಪುರಸ್ಕೃತ ಯೋಜನೆಗಳಾದ ಆಹಾರ ಮತ್ತು ಪೌಷ್ಠಿಕ ಭದ್ರತೆ (FNS) ಮತ್ತು ರಾಷ್ಟ್ರೀಯ ಖಾದ್ಯತೈಲ ಅಭಿಯಾನ (NMEO)ದಡಿ ಶೇ .50 ರ ಸಹಾಯಧನ ದರದಲ್ಲಿ ಜೈವಿಕ ಗೊಬ್ಬರ (ರೈಜೋಬಿಯಂ, ಅಜೋಟೋಬ್ಯಾಕ್ಟರ್, ಅಜೋಸ್ಪಿರಿಲಮ್ , ರಂಜಕ ಕರಗಿಸುವ ಜೈವಿಕ ಗೊಬ್ಬರ , ಸತು ಕರಗಿಸುವ ಜೈವಿಕ ಗೊಬ್ಬರ , ಪೊಟ್ಯಾಸಿಯಮ್ ಮೊಬಿಲೈಸಿಂಗ್ ಜೈವಿಕ ಗೊಬ್ಬರ ವ್ಯಾಮ್ ಜೈವಿಕ ಗೊಬ್ಬರ) ಗಳನ್ನು ಹಾಗೂ ಎರೆಹುಳು ಗೊಬ್ಬರ , ಸಾವಯವ ಗೊಬ್ಬರ (ಆರ್ಗಾನಿಕ್ ಮೆನ್ಯೂರ್), ರಂಜಕಯುಕ್ತ ಸಾವಯವ ಗೊಬ್ಬರ (PROM), ಖಾದ್ಯವಲ್ಲದ ಎಣ್ಣೆ ರಹಿತ ಹಿಂಡಿ ಗೊಬ್ಬರ , ಸಿಟಿ ಕಾಂಪೋಸ್ಟ್ (BULK SUPPLY), ಹಸಿರೆಲೆ ಗೊಬ್ಬರ ಬೀಜ , ಜೈವಿಕ ಪೀಡೆನಾಶಕ ಮತ್ತು ಸಸ್ಯ ಮೂಲ ಪೀಡೆನಾಶಕಗಳನ್ನು ಸಹಾಯಧನದಡಿ ರೈತ

		ಸಂಪರ್ಕ ಕೇಂದ್ರಗಳ ಮೂಲಕ ರೈತರಿಗೆ ಒದಗಿಸಿ , ಮಣ್ಣಿನ ಸಾವಯವ ಅಂಶವನ್ನು ಹೆಚ್ಚಿಸಲು ಹಾಗೂ ಪೀಡೆ ನಿರ್ವಹಣೆಯಲ್ಲಿ ಜೈವಿಕ ಪೀಡೆನಾಶಕಗಳನ್ನು ಉತ್ತೇಜಿಸಲು ಕ್ರಮ ಕೈಗೊಳ್ಳಲಾಗುತ್ತಿದೆ . 3. PM-PRANAM (PM Programme for Restoration, Awareness Generation, Nourishment and Amelioration of Mother-Earth) Scheme: ರಾಸಾಯನಿಕ ಗೊಬ್ಬರಗಳ ಬಳಕೆಗೆ ಪರ್ಯಾಯ ಗೊಬ್ಬರಗಳಾದ ಜೈವಿಕ /ಸಾವಯವ ಗೊಬ್ಬರ ಮತ್ತು ನ್ಯಾನೋ ಗೊಬ್ಬರಗಳ ಬಳಕೆ, ನೈಸರ್ಗಿಕ /ಸಾವಯವ ಕೃಷಿಯನ್ನು ಉತ್ತೇಜಿಸಲು ಹಾಗೂ ಸಂರಕ್ಷಣಾ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರವು ಈ ಯೋಜನೆಯನ್ನು ಜಾರಿಗೆ ತಂದಿರುತ್ತದೆ .

ಕೃಷಿ ನಿರ್ದೇಶಕರು

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)
ಸಂ:ಸ.ಸಂ.ವಿ/ಕ.ವಿ.ಸ./ಚು.ಗು.ಪ್ರ-651/2024-25 ಕೃಷಿ ಆಯುಕ್ತರ ಕಾರ್ಯಾಲಯ ಶೇಷಾದ್ರಿ ರಸ್ತೆ,
ಬೆಂಗಳೂರು-1,
ದಿನಾಂಕ: 18.07.2024

ರವರಿಗೆ
ಸರ್ಕಾರದ ಕಾರ್ಯದರ್ಶಿಗಳು
ಕೃಷಿ ಇಲಾಖೆ, ಬಹುಮಹಡಿ ಕಟ್ಟಡ,
ಬೆಂಗಳೂರು

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 651 ಕ್ಕೆ ಉತ್ತರಗಳನ್ನು ಸಲ್ಲಿಸುವ ಬಗ್ಗೆ
ಉಲ್ಲೇಖ

:

ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಇವರ ಪತ್ರ ಸಂಖ್ಯೆ
ಪ್ರಶಾವಿಸ/16 ನೇವಿಸ/4 ನೇಅ/ಪ್ರ.ಸಂ.651/2024, ದಿನಾಂಕ 09.07.2024

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಸಿದ್ದು ಸವದಿ (ತೇರದಾಳ) ರವರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 651 ಕ್ಕೆ ಉತ್ತರಗಳನ್ನು ಸಿದ್ದಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ

ಕೃಷಿ ನಿರ್ದೇಶಕರು